

ಕೋವಿಡ್ ಕೇಸುಗಳ ಸಂಖ್ಯೆ ಇದ್ದಕ್ಕಿದ್ದಂತೆ ಕಡಿಮೆಯಾಗಿ ಸರಕಾರ ಪಂಚಾಯತಿ ಚುನಾವಣಾ ದಿನಾಂಕ ಘೋಷಣೆ ಮಾಡಿತು. ಸಣ್ಣಪ್ಪ ಗೌಡರು ಇನ್ನಷ್ಟು ಬಿಜಿಯಾದರು.

ಹೀಗಿರುವಾಗ ಒಂದು ರಾತ್ರಿ ಲಗಮಣ್ಣ ಕರೆ ಮಾಡಿ ನಾಳೆ ಸಂಜೆಯೊಳಗಡೆ ಉಳಿದ ದುಡ್ಡು ತುಂಬಲಿಲ್ಲವೆಂದರೆ ಅಡ್ಮಿಷನ್ ಕ್ಯಾನ್ಸಲ್ ಮಾಡಿ ಬೇರೆಯವರಿಗೆ ಸೀಟು ಹಂಚಲಾಗುವುದೆಂದು ಆತಂಕದಿಂದ ತಿಳಿಸಿದಾಗ ಬಸಣ್ಣ ಗರ ಬಡಿದಂತೆ ಕುಳಿತುಕೊಂಡ. ಸಣ್ಣಪ್ಪ ಗೌಡ್ರು ಒಂದು ವಾರದಿಂದ ಊರಲ್ಲಿ ಇಲ್ಲ. ಇನ್ನು ಅಕ್ಕೋರ ಹತ್ತಿರ ಬಸಣ್ಣಾ ರೊಕ್ಕದ ವ್ಯವಹಾರ ಮಾಡಿದವನಲ್ಲ.

ಆದರೂ ಒಂದು ಮಾತು ಅಕ್ಕೋರನ್ನ ಕೇಳಿದ.

'ಬಸಣ್ಣ ಮೂರು ಲಕ್ಷ ನನ್ನ ಹತ್ರ ಎಲ್ಲಿ ಬರಬೇಕು. ಬೇಕಾದ್ರೆ ಸಣ್ಣಪ್ಪ ಗೌಡ್ರಿಗೆ ಗೊತ್ತಾಗದಂಗ ಬಂಗಾರದ ಡಾಬು ಕೊಡ್ತೇನಿ. ನಿನ್ನ ಮ್ಯಾಲ ನಂಬಿಕಿ ಐತಿ. ಆಮ್ಯಾಕಿಂದ ಸಾಲ ತೀರ್ಸು' ಎಂದು ಅಕ್ಕೋರು ಹೇಳಿದ ಮೇಲೆ ದೇವರಂತಹ ಅಕ್ಕೋರಿಗೆ ಕೈ ಮುಗಿದ. ಆದರೆ, ಡಾಬು ಮಾರಿದರೆ ಬರೋದು ಒಂದು ಕಾಲು ಲಕ್ಷ ಇನ್ನು ಬಾಕಿ ದುಡ್ಡು ಎಲ್ಲಿ ಹೊಂದಿಸೋದು? ಇದ್ದ ಹೊಲ ಅಡವಿಟ್ಟಾಯಿತು, ಕಾಸು ಕರಿಮಣಿ, ಸಾಸಿವೆ ಡಬ್ಬದ ಚಿಲ್ಲರೆ ಸೇರಿಸಿ ಒಂದೂವರೆ ಲಕ್ಷ ಹೊಂದಿಸಲಿಕ್ಕೆ ಕುರಿ ಕೋಣ ಬಿದ್ದಾಗಿತ್ತು. ಇನ್ನು ಒಂದೂ ಮುಕ್ಕಾಲು ಲಕ್ಷ? 'ನಾಳಿ ಬರ್ತಿನ್ರೀ ಮೇಡಮ್" ಅಂತ ವಾಪಸು ಮನೆಗೆ ಬಂದ ಬಸಣ್ಣ, ಜನಾಬಾಯಿ ಹತ್ರ ಎಲ್ಲಾ ಹೇಳಿದ.ನನ್ನ ಆರೋಗ್ಯ ಚೆನ್ನಾಗಿದ್ದರೆ ನಾನೂ ಕೂಲಿ ನಾಲಿ ಮಾಡಿ ನಾಕು ದುಡ್ಡು ಮಾಡ್ತಿದ್ದೆ ಅಂತ ಜನಾಬಾಯಿ ಬಲು ಗೋಳಾಡಿ ಇಬ್ಬರೂ ಅತ್ತು ಊಟ ಮಾಡದೇ ಮಲಗಿದರು.

ಸಮಯ ಮಧ್ಯರಾತ್ರಿ ಆಸುಪಾಸು. ಜನಾಬಾಯಿ